**ಕರ್ನಾಟಕ ಸರ್ಕಾರ**
**ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ**
**ರಾಷ್ಟ್ರೀಯ ಸೇವಾ ಯೋಜನೆ**

**ಸಂಖ್ಯೆ:** ಡಿಟಿಇ/ಎನ್ಎಸ್ಎಸ್/02/ಚಟುವಟಿಕೆ/2022-23

ಆಯುಕ್ತರ ಕಛೇರಿ,
ಅರಮನೆ ರಸ್ತೆ ಬೆಂಗಳೂರು-01
ದಿನಾಂಕ: 10.06.2022

**ಜ್ಞಾಪನ**

ವಿಷಯ : ರಾಷ್ಟ್ರೀಯ ಸೇವಾ ಯೋಜನೆ ಕಲ್ಯಾಣ ನಿಧಿಗೆ ಸಂಗ್ರಹವಾದ ಅಭಿವೃದ್ಧಿ ಶುಲ್ಕವನ್ನು ಸಂಸ್ಥೆಯ ಪಿಡಿ ಖಾತೆಯಲ್ಲಿಯೇ ಉಳಿಸಿಕೊಂಡಿರುವ ಬಗ್ಗೆ ಮಹಾಲೇಖಪಾಲರ ಆಕ್ಷೇಪಣೆಯ ಬಗ್ಗೆ.

ಉಲ್ಲೇಖ :
1. ಸರ್ಕಾರದ ಆದೇಶ ಸಂಖ್ಯೆ: ವಾಪ್ರಯು 36-3 ರಾಸೇಯೋ 2003, ದಿನಾಂಕ: 08.11.2002
2. ಸರ್ಕಾರದ ಆದೇಶ ಸಂಖ್ಯೆ :ಪಾಪ್ರಯು 36-3 ಎನ್ ಎಸ್ ಎಸ್ 2002 ದಿನಾಂಕ:08.01.2004
3. ದಿನಾಂಕ: 13.08.2009ರಂದು ನಡೆದ ರಾಜ್ಯ ಮಟ್ಟದ 2009-10ನೇ ಸಾಲಿನ ಎನ್.ಎಸ್.ಎಸ್. ಸಲಹಾ ಸಮಿತಿಯ ನಡಾವಳಿ
4. ಸಮಪಾಶಿ/179/ಸಿಬ್ಬಂದಿ/2021-22/05 ದಿನಾಂಕ: 21.04.2022
5. ಸಪಾಚಿ/03/ನಗದು/2022-23 ದಿನಾಂಕ: 06.05.2022
6. ರಾಜ್ಯ ಎನ್ಎಸ್ಎಸ್ ಅಧಿಕಾರಿಯವರ ಪತ್ರ ಸಂಖ್ಯೆ:ಯುಸೇಇ/ರಾಸೇಯೋ/19/2021/2022-23/123 ದಿನಾಂಕ: 06.06.2022
7. ಇಲಾಖೆಯ ಪತ್ರ ಸಂಖ್ಯೆ : ಡಿಟಿಇ/ಎನ್ ಎಸ್ ಎಸ್/ಚಟುವಟಿಕೆ/02/2022-23 ದಿನಾಂಕ: 23.08.2019
8. ಕೇಂದ್ರ ಸರ್ಕಾರದ ರಾಸೇಯೋ ಕೈಪಿಡಿ -2006

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಹಾಗೂ ಉಲ್ಲೇಖ(1&2)ರ ಆದೇಶದಲ್ಲಿ ವಿಶ್ವವಿದ್ಯಾಲಯ/ನಿರ್ದೇಶನಾಲಯಗಳು ಪ್ರತಿ ವಿದ್ಯಾರ್ಥಿಯಿಂದ ಪ್ರವೇಶದ ಸಮಯದಲ್ಲಿ ರೂ.10/- (ಹತ್ತು ರೂಪಾಯಿಗಳು ಮಾತ್ರ) ಅನ್ನು ಎನ್.ಎಸ್.ಎಸ್. ಕಲ್ಯಾಣ ನಿಧಿಗೆ ಅಭಿವೃದ್ಧಿ ಶುಲ್ಕವಾಗಿ ಸಂಗ್ರಹಿಸಿ ಕಾಲೇಜು, ವಿಶ್ವವಿದ್ಯಾಲಯ/ನಿರ್ದೇಶನಾಲಯ, ಮತ್ತು ರಾಷ್ಟ್ರೀಯ ಸೇವಾ ಯೋಜನಾ ಕೋಶಕ್ಕೆ ಕ್ರಮವಾಗಿ 4:4:2ರ ಅನುಪಾತದಲ್ಲಿ ವಿಂಗಡಿಸಿ ಆಯಾ ಅನುಪಾತಕ್ಕೆ ತಕ್ಕಂತೆ ಕಾಲೇಜು ಹಂತದಲ್ಲಿ ಎನ್.ಎಸ್.ಎಸ್. ಉದ್ದೇಶಕ್ಕಾಗಿ ಬಳಸಲು ಹಾಗೂ, ವಿಶ್ವವಿದ್ಯಾಲಯ/ನಿರ್ದೇಶನಾಲಯ ಮತ್ತು ರಾಜ್ಯ ಎನ್.ಎಸ್.ಎಸ್ ಕೋಶಕ್ಕೆ ಜಮೆ ಮಾಡಲು ಸೂಚಿಸಲಾಗಿರುತ್ತದೆ. ಉಲ್ಲೇಖ (3)ರಲ್ಲಿ ಸದರಿ ಮೊತ್ತವು ಎನ್.ಎಸ್.ಎಸ್. ಧ್ಯೇಯೋದ್ದೇಶ ಹಾಗೂ ಮಾರ್ಗಸೂಚಿಗಳಿಗೆ ವಿರುದ್ಧವಾಗಿ ವಿನಿಯೋಗವಾಗಿದ್ದನ್ನು ಆಕ್ಷೇಪಿಸಿ 2010-11ನೇ ಸಾಲಿನಿಂದ ಎನ್.ಎಸ್.ಎಸ್. ಕಲ್ಯಾಣ ನಿಧಿಗೆ ಅಭಿವೃದ್ಧಿ ಶುಲ್ಕ ಸಂಗ್ರಹಿಸುವುದನ್ನು ರದ್ದುಗೊಳಿಸಲಾಗಿದೆ.

ಮುಂದುವರೆದು, ಆಯಾ ಅವಧಿಗೆ 4:4:2 ಅನುಪಾತದಂತೆ ವಿಶ್ವವಿದ್ಯಾಲಯ/ನಿರ್ದೇಶನಾಲಯ ಮತ್ತು ರಾಜ್ಯ ಎನ್.ಎಸ್.ಎಸ್ ಕೋಶಕ್ಕೆ ಜಮೆ ಮಾಡದೇ ಸಂಸ್ಥೆಯ ಪಿಡಿ ಖಾತೆಯಲ್ಲಿಯೇ ಉಳಿಸಿಕೊಂಡಿರುವ ಬಗ್ಗೆ ಮಹಾಲೇಖಪಾಲರ ಆಕ್ಷೇಪಣೆಗೆ ಕೈಗೊಳ್ಳಬೇಕಾಗಿರುವ ಕ್ರಮದ ಬಗ್ಗೆ ಉಲ್ಲೇಖ (4) ಮತ್ತು (5) ರಲ್ಲಿನ ಪಾಲಿಟೆಕ್ನಿಕ್ ಸಂಸ್ಥೆಗಳ ಪ್ರಾಂಶುಪಾಲರು ಕೋರಿರುತ್ತಾರೆ. ಇದೇ ರೀತಿಯಾಗಿ ರಾ.ಸೇಯೋ ಅಭಿವೃದ್ಧಿ ಶುಲ್ಕವನ್ನು ಮೇಲೆ ತಿಳಿಸಿದ ಅನುಪಾತದಂತೆ ವಿಶ್ವವಿದ್ಯಾಲಯ/ನಿರ್ದೇಶನಾಲಯ ಮತ್ತು ರಾಜ್ಯ ಎನ್.ಎಸ್.ಎಸ್ ಕೋಶಕ್ಕೆ ಜಮೆ ಮಾಡದೇ ಬಾಕಿ ಉಳಿಸಿಕೊಂಡಿರುವ ಪಾಲಿಟೆಕ್ನಿಕ್ ಸಂಸ್ಥೆಗಳೂ ಸಹ ಉಲ್ಲೇಖ (6) ರಲ್ಲಿ ಅನುಮತಿಸಿದಂತೆ ಸಂಸ್ಥೆಯ ಹಂತದಲ್ಲಿ ಸ್ವಾತಂತ್ರ್ಯ ಅಮೃತ ಮಹೋತ್ಸವ ಕಾರ್ಯಕ್ರಮಗಳಿಗೆ ಬಳಸಲು ಅನುಮತಿಸಿದೆ. ಸದರಿ ಅನುಮತಿಯಂತೆ ಉಲ್ಲೇಖ (7) ರಲ್ಲಿ ತಿಳಿಸಲಾದ ಎನ್.ಎಸ್.ಎಸ್ ಧ್ಯೇಯೋದ್ದೇಶಗಳಿಗೆ ಪೂರಕವಾಗುವ ಮತ್ತು ಉಲ್ಲೇಖ (8)ರಲ್ಲಿ [https://nss.gov.in/] chapter 3 Pattern of Financial Expenditure at college, section 5 ರಲ್ಲಿ ನಿರ್ಬಂಧಿಸಿದ ವೆಚ್ಚಗಳನ್ನು ಹೊರತು ಪಡಿಸಿ ಸದರಿ ಮೊತ್ತವನ್ನು ಸ್ವಾತಂತ್ರ್ಯದ ಅಮೃತ ಮಹೋತ್ಸವ ಕಾರ್ಯಕ್ರಮಗಳಿಗೆ ಮಾತ್ರ ಬಳಸಲು ಕ್ರಮ ಕೈಗೊಳ್ಳುವುದು. ಕೈಗೊಂಡ ಕ್ರಮದ ಬಗ್ಗೆ ವರದಿಯನ್ನು ಇಲಾಖೆಯ ರಾ.ಸೇ.ಯೋ ಕೋಶಕ್ಕೆ ಕಡ್ಡಾಯವಾಗಿ ಸಲ್ಲಿಸುವುದು.

ನಿರ್ದೇಶಕರು 10/06/2022

ಪ್ರತಿ: -

1) ~~ಇ~~ ಆಡಳಿತ-ಅಂತರ್ ಜಾಲ ತಾಣದಲ್ಲಿ ಪ್ರಕಟಿಸಲು
2) ಕಛೇರಿ ಕಡತಕ್ಕೆ.